## ಬಗೆಬಗೆ ಹಂಸ

ಈ ಚಿತ್ರದಲ್ಲಿ ಎರಡು ವಿಧದ ಹಂಸಗಳಿವೆ. ಒಂದು ಹೆಣ್ಣಿನ ಮುಖವಾದರೆ ಇನ್ನೊಂದು ಗಜಮುಖ. ಎರಡೂ ಹಂಸಗಳಲ್ಲಿ ಕಂಡುಬರುವ ಕೆತ್ತನೆ ಶಿಲ್ಪಿಯ ಕಲಾ ಪ್ರೌಢಿಮೆಯನ್ನು ಸಾರುತ್ತದೆ. ಹೆಣ್ಣಿನ ಮುಖದ ಹಂಸದ ಶಿರೋಭಾಗ ಹಾಗೂ ಆನೆ ಮುಖದ ಹಂಸದ ಸೊಂಡಿಲು ಅಪೂರ್ವವಾಗಿ ಕೆತ್ತಲ್ಪಟ್ಟಿದೆ. ನಿಜವಾಗಿ ಇಂತಹದೊಂದು ಪ್ರಾಣಿ ಇತ್ತೆಂಬ ಭ್ರಮೆ ಉಂಟು ಮಾಡುತ್ತವೆ ಈ ಶಿಲ್ಪಗಳು. ಇವು ಕೆಳದಿಯ ವೀರಭದ್ರ ದೇವಾಲಯದ ಗೋಡೆಯ ಮೇಲಿವೆ.

**-ಮಧುರಾ ತಾಂಡೇಲ, ಗಂಗೊಳ್ಳಿ**







## ಫ್ರಿಡ್ಜ್ ಇಲ್ಲ ಎನ್ನುವ ಕೊರಗು ಇನ್ನಿಲ್ಲ!

ಆಹಾರ ಪದಾರ್ಥಗಳನ್ನು ಕೆಡದಂತೆ ಅಥವಾ ತಾಜಾ ಆಗಿ ಇಡಲು ಫ್ರಿಡ್ಜ್‌ಗಳು ಸಹಕಾರಿ. ಆದರೆ ಬಡವರಿಗೆ ಫ್ರಿಡ್ಜ್‌ಗಳನ್ನು ಕೊಳ್ಳುವ ತಾಕತ್ತಿರಲ್ಲ. ಅಂತಹ ವರ್ಗಕ್ಕೆ ಅನುಕೂಲಕರವಾದ, ಸುಧಾರಿತ ಹಾಗೂ ನೈಸರ್ಗಿಕ ಫ್ರಿಡ್ಜ್ ಅನ್ನು ಬಳ್ಳಾರಿ ಜಿಲ್ಲೆಯ ಹಡಗಲಿಯ ಯುವಕ ಶಿವರಾಜ್ ಪಾಟೀಲ್ ಪರಿಚಯಿಸಿದ್ದಾರೆ.

ಶಿವರಾಜ್ ಒಡೆದ ನೀರಿನ ಅಥವಾ ಆಯಿಲ್ ಪ್ಲಾಸ್ಟಿಕ್ ಡ್ರಮ್‌ನಲ್ಲಿ ಮರಳು ತುಂಬಿ, ಅದರ ನಡುವೆ ಮಡಕೆ ಇಟ್ಟಿದ್ದಾರೆ. ಇಂತಹ ಮಡಿಕೆಯಲ್ಲಿಟ್ಟ ತರಕಾರಿಗಳು ವಾರ ಕಳೆದರೂ ಅದೇ ತಾಜಾತನ ಇರುವುದು ವಿಶೇಷ! 'ಮಡಕೆಯನ್ನು ಮಣ್ಣಿನಲ್ಲಿ ಅಥವಾ ಮರಳಿನ ಮೇಲಿಟ್ಟರೆ ತೇವಾಂಶ ಕಾಯ್ದುಕೊಳ್ಳಲು ಯಥೇಚ್ಚ ನೀರು ಪೋಲಾಗುತ್ತದೆ. ಆದರೆ ಈ ಪದ್ಧತಿಯಿಂದ ವಾರಕ್ಕೊಮ್ಮೆ ಕೇವಲ ಒಂದು ಬಿಂದಿಗೆ ನೀರು ಹಾಕಿದರೆ ಸಾಕು' ಎನ್ನುತ್ತಾರೆ ಶಿವರಾಜ್ ಪಾಟೀಲ್. ಅಂದ ಹಾಗೆ ಇದಕ್ಕೆ ತಗಲುವ ವೆಚ್ಚ ಕೇವಲ 100–150 ರೂಪಾಯಿಗಳಾಗಿದ್ದು, ಇದನ್ನು ಮನೆಯ ಒಳಗಡೆ ಇಟ್ಟುಕೊಳ್ಳಬಹುದು.

ಚಿತ್ರ ಬರಹ:

**ಸ್ವರೂಪಾನಂದ ಎಂ. ಕೊಟ್ಟೂರು**

## ಕಸದಿಂದ ಕಲೆ!

ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಮೂರೂರಿನ ಯುವಕ ಶಿಮೂರ್ತಿಯ ಮನೆ ಇರುವುದು ತೋಟದ ನಡುವೆ. ಮನೆಯ ಅಟ್ಟದ ಮೇಲೆ ಅಡಕೆ, ತೆಂಗಿನಕಾಯಿ ತುಂಬಿದ್ದರೆ, ಶಿವಮೂರ್ತಿಯ ಕೋಣೆಯಲ್ಲಿ ತುಂಬಿರುವುದು ಅಡಕೆ, ತೆಂಗಿನಕಾಯಿಯ ತ್ಯಾಜ್ಯ ವಸ್ತುಗಳು. ಸೃಜನಾತ್ಮಕ ಮನಸ್ಸಿರುವ ಶಿವಮೂರ್ತಿಯ ಕಣ್ಣಿಗೆ ಈ ತ್ಯಾಜ್ಯ ವಸ್ತುಗಳೇ ಅಮೂಲ್ಯ ವಸ್ತುವಾಗಿ ಕಾಣುತ್ತವೆ. ಶಿವಮೂರ್ತಿಯವರ ಕೈಯಲ್ಲಿ ಈ ಕಸವೆಂಬ ತ್ಯಾಜ್ಯ ವಸ್ತುಗಳೇ ಕಲೆಯಾಗಿ ರೂಪುಗೊಳ್ಳುವ ಪರಿಯೇ ಅಚ್ಚರಿ ತರಿಸುತ್ತದೆ.

ನೂರಾರು ಇಂತಹ 'ಕಸಾಕೃತಿ'ಗಳು ಅವರ ಮನೆಗೆ ಹೋದವರಿಗೆ ಸ್ವಾಗತ ನೀಡುತ್ತವೆ.

**-ಜಯಾ ಯಾಜಿ, ಶಿರಾಲಿ**

